SEVA BHARATHI
सेवा ही परमो धर्मः

ಸಂಪುಟ : 03
ಸಂಚಿಕೆ : 02

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
ಮಾಸಿಕ e-ನ್ಯೂಸ್ ಲೆಟರ್ – ಏಪ್ರಿಲ್ 2022

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ-॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216



## ಉಡುಪಿ ಜಿಲ್ಲಾ ಕಾರ್ಯಾಲಯ 'ಸೇವಾನಿಕೇತನ' ಉದ್ಘಾಟನಾ ಸಮಾರಂಭ

## ಸೇವಾಧಾಮಕ್ಕೆ ಸಹಾಯಹಸ್ತ, ಕೊಡುಗೆ ಮತ್ತು ಭೇಟಿಗಳು

## ಮೆಡಿಕಲ್ ಕಿಟ್‌ಗಾಗಿ ಕೊಡುಗೆ

## ರೋಟರಿ ಕ್ಲಬ್‌ನಲ್ಲಿ ಮಾಹಿತಿ ಕಾರ್ಯಾಗಾರ

## ಉಚಿತ ಆರೋಗ್ಯ ತಪಾಸಣೆ ಮತ್ತು ಅರಿವು ಕಾರ್ಯಾಗಾರ

## ವಿಧಾನ ಪರಿಷತ್ ಸದಸ್ಯರಿಂದ ಸೇವಾಧಾಮಕ್ಕೆ 19 ಗಾಲಿ ಕುರ್ಚಿಗಳ ಕೊಡುಗೆ

## ಏಪ್ರಿಲ್ ತಿಂಗಳಲ್ಲಿ ಗಾಲಿಕುರ್ಚಿ ಪಡೆದುಕೊಂಡವರು

Mob. : 99454 91241 | E-mail: sevabharathikanyady@gmail.com | Website: www.sevaabharathi.org

## ನಮ್ಮಿಂದಿಷ್ಟು

ಉಡುಪಿಯಲ್ಲಿ ನಮ್ಮ ಕಾರ್ಯಗಳಿಗೆ ವೇಗ ನೀಡಲು ಜಿಲ್ಲಾ ಕಾರ್ಯಾಲಯವು ಕೆಲಸ ನಿರ್ವಹಿಸಲು ಪ್ರಾರಂಭ ಗೊಂಡಿರುವುದು ಒಂದು ಮಹತ್ತರ ಹೆಜ್ಜೆಯಾಗಿದೆ. ಈ ನಿರ್ಧಾರದ ಹಿಂದೆ ಫಲಾನುಭವಿಗಳ ಒತ್ತಾಸೆಯಿದೆ. ಕಾರ್ಯ ಕರ್ತರ ಮತ್ತು ಸಿಬ್ಬಂದಿಗಳ ಪರಿಶ್ರಮವಿದೆ. ಇನ್ನು ಜನಪ್ರತಿನಿಧಿ ಗಳು ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಇಲಾಖೆಗಳು 5% ಮೀಸಲು ಅನುದಾನಗಳನ್ನು ಫಲಾನುಭವಿಗಳಿಗೆ ಸುಲಭವಾಗಿ ಸಿಗುವಂತೆ ಮನಸು ಮಾಡಬೇಕಿದೆ.

ಕೊಡುಗೈದಾನಿಗಳು, ಜನಪ್ರತಿನಿಧಿಗಳು, ಇತರೇ ಸ್ವಯಂ ಸೇವಾ ಸಂಸ್ಥೆಗಳು ಬೆಳ್ತಂಗಡಿ ತಾಲೂಕಿನಲ್ಲಿರುವ ಸೌತಡ್ಕ ಸೇವಾಧಾಮ ಪುನಶ್ಚೇತನ ಕೇಂದ್ರವನ್ನು ಭೇಟಿಮಾಡಬೇಕಾಗಿದೆ. ಇಂತಹ ಕೇಂದ್ರಗಳ ಅನಿವಾರ್ಯತೆ ಪ್ರತಿ ಜಿಲ್ಲೆಗೊಂದರಂತೆ ಅಗತ್ಯವಿದೆ.

ಈ ನಿಟ್ಟಿನಲ್ಲಿ ಉಡುಪಿ ಜಿಲ್ಲೆಯಲ್ಲಿ ಪಾಳು ಬಿದ್ದಿರುವ ಸರಕಾರಿ ಶಾಲೆಗಳ ಲಭ್ಯತೆ ಬಗ್ಗೆ ಮಾತುಕತೆ ಪ್ರಾರಂಭಗೊಂಡಿದೆ. ಫಲಾನುಭವಿಗಳಿಗೆ ಒತ್ತಡ, ಗಾಯಗಳ ಗುಣಪಡಿಸುವಿಕೆ ಮತ್ತು ವ್ಯಾಯಾಮ ಕೇಂದ್ರ ಪ್ರಾರಂಭಗೊಂಡರೆ ಒಂದಷ್ಟು ಅವರ ಜೀವನದಲ್ಲಿ ನೆಮ್ಮದಿ ಕಾಣಬಹುದಾಗಿದೆ. ಸುತ್ತಮುತ್ತಲೂ ಹಲವಾರು ಪರಿಚಯಸ್ಥರೇ ಬೆನ್ನುಹುರಿ ಅಪಘಾತಕ್ಕೊಳ ಗಾಗುತ್ತಿರುವುದು ಕಂಡುಬಂದಿದೆ. ಅಪಘಾತಕ್ಕೊಳಗಾದ ನಂತರ ಆಸ್ಪತ್ರೆಗೆ ತಲುಪಿಸುವವರೆಗೆ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆಯ ಅರಿವು ಇಲ್ಲದ ಕಾರಣ ಗಂಭೀರ ಪರಿಣಾಮಗೊಳ್ಳುತ್ತಿರುವುದು ಚಿಂತನೆ ಮಾಡಬೇಕಿರುವ ಸಂಗತಿಯಾಗಿದೆ.

ಒಟ್ಟಿನಲ್ಲಿ 'ಸರ್ವೇಜನಾಃ ಸುಖಿನೋಭವಂತು' ಆಗಬೇಕು ಅದಕ್ಕಾಗಿ ಸೇವೆಯನ್ನೇ ಪರಮಧರ್ಮವಾಗಿಸುವುದು ಸರ್ವಕಾಲಿಕ ಶ್ರೇಯಸ್ಕರ.

ತಮ್ಮವ..

**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

### ಪ್ರಧಾನ ಕಚೇರಿ :

ಸೇವಾನಿಕೇತನ, ಕನ್ಯಾಡಿ–॥
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

### ಜಿಲ್ಲಾ ಕಚೇರಿ :

ಸೇವಾನಿಕೇತನ
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿ
ಹೆರ್ಗ, ಉಡುಪಿ ತಾಲೂಕು – 576 107
ಮೊ.: 9606044893

### ಸೇವಾ ಕೇಂದ್ರ :

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)

ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

### ನಮ್ಮ ತಂಡ

ಶ್ರೀ ಕೆ. ವಿನಾಯಕ ರಾವ್ – ಅಧ್ಯಕ್ಷರು
ಶ್ರೀಮತಿ ಸ್ವರ್ಣಗೌರಿ – ಕಾರ್ಯದರ್ಶಿ
ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ – ಖಜಾಂಚಿ
ಶ್ರೀ ಕೆ. ಯು. ಗಿರೀಶ್ ರಾವ್ – ಉಪಾಧ್ಯಕ್ಷರು
ಶ್ರೀ ಕೆ. ಬಾಲಕೃಷ್ಣ – ಟ್ರಸ್ಟಿ

### ಸಲಹಾ ಮಂಡಳಿ

ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
ಶ್ರೀಮತಿ ಮನೋರಮ ಭಟ್
ಶ್ರೀ ಉದಯಶಂಕರ್
ಶ್ರೀ ಹರೀಶ್ ಟಿ. ಪಿ.
ಶ್ರೀ ಗೋಪಾಲ ಕೆ. ಪಿ.
ಶ್ರೀ ವಿಷ್ಣು ಪ್ರಸಾದ್ ತೆಂಕಿಲ್ಲಾಯ
ಶ್ರೀಮತಿ ಜ್ಯೋಸ್ ಪಿರೇರಾ

### ಸಂಚಾಲಕರು

ಶ್ರೀ ಕೆ. ಪುರಂದರ ರಾವ್ – ಸಂಚಾಲಕರು, ಸೇವಾಧಾಮ
ಶ್ರೀಯುತ ರಾಯನ್ ಫೆರ್ನಾಂಡಿಸ್ – ನಿರ್ದೇಶಕರು, ಸೇವಾಧಾಮ
ಶ್ರೀ ವಿಜಯ ಕೊಡವೂರು – ನಿರ್ದೇಶಕರು, ಸೇವಾಧಾಮ
ಡಾ. ಮುರಳೀಧರ ನಾಯಕ್ – ನಿರ್ದೇಶಕರು, ಸೇವಾಧಾಮ

# ಉಡುಪಿ ಜಿಲ್ಲಾ ಕಾರ್ಯಾಲಯ 'ಸೇವಾನಿಕೇತನ' ಉದ್ಘಾಟನಾ ಸಮಾರಂಭ




**ಉಡುಪಿ :** ಸೇವಾಭಾರತಿಯು ಕಳೆದ 17 ವರ್ಷಗಳಿಂದ ವಿವಿಧ ಕ್ಷೇತ್ರಗಳಲ್ಲಿ ಸಾಮಾಜಿಕ ಸೇವೆಗಳನ್ನು ಸಲ್ಲಿಸುತ್ತಾ ಬಂದಿರುತ್ತದೆ. ಧರ್ಮಸ್ಥಳ ಗ್ರಾಮದ ಕನ್ಯಾಡಿ–2 ಎಂಬಲ್ಲಿ ಪ್ರಧಾನ ಕಚೇರಿಯನ್ನು ಹೊಂದಿ 5 ಜಿಲ್ಲೆಗಳ ವ್ಯಾಪ್ತಿಯಲ್ಲಿ ತನ್ನ ಕಾರ್ಯವನ್ನು ವಿಸ್ತರಿಸುತ್ತಿದ್ದು, ಪ್ರಸ್ತುತ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಸೇವಾಧಾಮ ಹೆಸರಿನಲ್ಲಿ ಪುನಃಶ್ಚೇತನ ಕೇಂದ್ರವನ್ನು ಬೆಳ್ತಂಗಡಿ ತಾಲೂಕಿನ ಸೌತಡ್ಕದಲ್ಲಿ ಪ್ರಾರಂಭಿಸಿದೆ. ಮಹಿಳೆಯರ ಸ್ವಾವಲಂಬಿ ಬದುಕಿಗಾಗಿ ಉಚಿತ ಟೈಲರಿಂಗ್ ತರಬೇತಿ ಶಿಬಿರವನ್ನು ಸಬಲಿನಿ ಯೋಜನೆಯಡಿ ಕಾರ್ಯಾನುಷ್ಠಾನಗೊಳಿಸುತ್ತಿದೆ. ಅಲ್ಲದೇ ನಿರಂತರ ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆಂಬುಲೆನ್ಸ್ ಸೇವೆಯು 'ಆರೋಗ್ಯಮ್' ಯೋಜನೆಯಡಿ ಲಭ್ಯವಿದೆ. ಉಡುಪಿ ಜಿಲ್ಲೆಯಲ್ಲಿ ಈಗಾಗಲೇ ಹಲವು ಸಂಘ– ಸಂಸ್ಥೆಗಳ ಸಹಕಾರ ಹಾಗೂ ಸಹಭಾಗಿತ್ವದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರನ್ನು ಗುರುತಿಸಿ, ಪುನಃಶ್ಚೇತನಗೊಳಿಸುವುದರ ಜೊತೆಗೆ ಅವರಿಗೆ ಅಗತ್ಯ ಸಾಧನ– ಸಲಕರಣೆಗಳನ್ನು ಒದಗಿಸುತ್ತಾ, ರ್‍ಯಾಂಪ್ ಶೌಚಾಲಯಗಳಿಗಾಗಿ ಆರ್ಥಿಕ ಸಹಕಾರ ನೀಡುತ್ತಾ, ಅವರ ಸ್ವಾವಲಂಬಿ ಬದುಕಿಗಾಗಿ ಶ್ರಮ ವಹಿಸುತ್ತಾ ಬಂದಿರುತ್ತದೆ.

ಈ ತನಕ 126 ಮಂದಿ ಇಂತಹ ದಿವ್ಯಾಂಗರನ್ನು ಪುನಃಶ್ಚೇತನ ಗೊಳಿಸಲಾಗಿದೆ. ಹಲವರಿಗೆ ಸಾಧನ, ಸಲಕರಣೆಗಳ, ರ್‍ಯಾಂಪ್ಗಳ, ಶೌಚಾಲಯಗಳ ಅವಶ್ಯಕತೆಯಿದೆ. ಸರಕಾರ ಮತ್ತು ವಿವಿಧ ಸಂಘ ಸಂಸ್ಥೆಗಳ ಸಹಕಾರದಲ್ಲಿ ಈ ಜಿಲ್ಲೆಗೊಂದು ಕಾರ್ಯಾಲಯದ ಅವಶ್ಯಕತೆಯನ್ನು ಮನಗಂಡು "ಸೇವಾನಿಕೇತನ" ಎಂಬ ಹೆಸರಿನಲ್ಲಿ ಉಡುಪಿ ಜಿಲ್ಲಾ ಕಾರ್ಯಾಲಯದ ಉದ್ಘಾಟನಾ ಸಮಾರಂಭ 07/04/2022 ಗುರುವಾರ ಪೂರ್ವಾಹ್ನ 11:00 ಗಂಟೆಗೆ ಉಡುಪಿಯ ಹೆರ್ಗದ ಶ್ರೀ ದುರ್ಗಾಪಮೇಶ್ವರೀ ದೇವಸ್ಥಾನದ ಬಳಿ ಜರುಗಿತು. ಈ ಕಚೇರಿಯ ಉದ್ಘಾಟನೆಯನ್ನು ಡಾ. ನವೀನ ವೈ. ಭಟ್, ಸಿಇಒ ಜಿಲ್ಲಾ ಪಂಚಾಯತ್, ಉಡುಪಿ ಜಿಲ್ಲೆ ಇವರು ನೆರವೇರಿಸಿದರು. ಈ ಕಾರ್ಯಕ್ರಮದಲ್ಲಿ ಸೇವಾಭಾರತಿಯ ಸಲಹಾ ಮಂಡಳಿಯ ಸದಸ್ಯರಾಗಿರುವ ಶ್ರೀ ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್, ದಿಕ್ಸೂಚಿ ಭಾಷಣವನ್ನು ಮಾಡಿದರು. ಅದೇ ರೀತಿ ಡಾ. ಕೆ.ನಾರಾಯಣ ಶೆಣೈ, ಜಿಲ್ಲಾ ಸಂಘಚಾಲಕರು, ರಾಷ್ಟ್ರೀಯ ಸ್ವಯಂಸೇವಕ ಸಂಘ, ಹಾಗೂ ಪ್ರಾಧ್ಯಾಪಕರು ಎಂಐಟಿ ಮಣಿಪಾಲ ಇವರು ಮಾತನಾಡಿ, ಮುಂದೊಂದು ದಿನ ಸೇವಾಭಾರತಿಯ ಅಧ್ಯಕ್ಷರಾದ ಕೆ. ವಿನಾಯಕರಾವ್‌ರವರನ್ನು ರಾಷ್ಟ್ರಪತಿ ಭವನದಲ್ಲಿ ಪದ್ಮಶ್ರೀ ಪುರಸ್ಕೃತರಾಗುವ ಸುಸಂದರ್ಭ ಒದಗಿ ಬರಲಿ ಎಂದು ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ಸುಮಿತ್ರ ನಾಯಕ್, ಅಧ್ಯಕ್ಷರು ನಗರಸಭೆ, ಡಾ. ಶರತ್ ಕುಮಾರ ರಾವ್ ಮತ್ತು ಪ್ರೊಫೆಸರ್ ಕೆ.ಎಂ.ಸಿ ಮಾಹೆ, ಮಣಿಪಾಲ, ಶ್ರೀ ಗುರುಪ್ರಸಾದ ಶೆಟ್ಟಿ, ಡಿಜಿಎಂ ಸೆಲ್ಕೋ ಲಿಮಿಟೆಡ್ ಉಡುಪಿ, ಡಾ. ಮೈತ್ರೇಯಿ ಸಿ.ಪಾಟೀಲ್, ಅಸಿಸ್ಟೆಂಟ್ ಪ್ರೊಫೆಸರ್ ಕೆಎಂಸಿ ಮಣಿಪಾಲ, ರೋ.ಎಂ.ಜಿ. ರಾಮಚಂದ್ರ ಮೂರ್ತಿ, ಜಿಲ್ಲಾ ಗವರ್ನರ್ ಶ್ರೀಮತಿ ಅಶ್ವಿನಿ ಪೂಜಾರಿ, ನಗರಸಭಾ ಸದಸ್ಯರು, ಹೆರ್ಗ, ಉಡುಪಿ, ರೋ. ಜಯಪ್ರಕಾಶ ಶೆಟ್ಟಿ, ರೋ. ಧನಂಜಯ ಪ್ರಭು, ರೋ. ಪದ್ಮನಾಭ ಕಾಂಚನ್, ರೋ. ಡಾ. ಕಲ್ಯಾ ಸುರೇಶ ಶೆಣೈ, ಶ್ರೀಮತಿ ಲತಾ ಭಟ್, ಶ್ರೀ ವಿಜಯ ಉಪಸ್ಥಿತರಿದ್ದರು.

ಈ ಸಮಾರಂಭದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಮೆಡಿಕಲ್ ಕಿಟ್‌ಗಳನ್ನು ವಿತರಿಸಲಾಯಿತು. ಹಾಗೆಯೇ ಫಲಾನುಭವಿಗಳಿಗೆ ಸರ್ಕಾರದಿಂದ ಸಿಗಬೇಕಾಗಿರುವ ಸವಲತ್ತುಗಳಿಗೆ ಮನವಿಯನ್ನು ಡಾ. ನವೀನ ವೈ. ಭಟ್, ಸಿಇಒ ಜಿಲ್ಲಾ ಪಂಚಾಯತ್, ಉಡುಪಿ ಜಿಲ್ಲೆಯವರಿಗೆ ಹಸ್ತಾಂತರಿಸಲಾಯಿತು. ಮತ್ತು ಸಂಸ್ಥೆಯ ಕಾರ್ಯ ವ್ಯವಹಾರಕ್ಕಾಗಿ, ಕೆಎಂಸಿ ಮಣಿಪಾಲದೊಂದಿಗೆ ಒಡಂಬಡಿಕೆ ಪತ್ರ ವಿನಿಮಯ ಮಾಡಲಾಯಿತು. ಡಾ. ಕೆ. ನಾರಾಯಣ ಶೆಣೈ, ರೋ. ಎಂ.ಜಿ. ರಾಮಚಂದ್ರಮೂರ್ತಿ, ಶ್ರೀ ಗುಜ್ಜಾಡಿ ಪ್ರಭಾಕರ, ನರಸಿಂಹ ನಾಯಕರ ಮೂಲಕ ಒಂದು ಗಾಲಿಕುರ್ಚಿಯ ಬಾಬ್ತು ತಲಾ ರೂ. 15000/– ಮೊತ್ತ ಸೇವಾಭಾರತಿಗೆ ದೊರೆಕಿತು. ಈ ಕಾರ್ಯಕ್ರಮದಲ್ಲಿ ಕನ್ಯಾಡಿಯ 3 ದಿವ್ಯಾಂಗರು ಸೇರಿ ಒಟ್ಟು 27 ಜನ ಬೆನ್ನುಹುರಿ ಅಪಘಾತಕ್ಕೊಳಗಾದವರು ಭಾಗಿಗಳಾದರು. ಸೇವಾಭಾರತಿಯ ಟ್ರಸ್ಟಿಯಾದ ಶ್ರೀಮತಿ ಸ್ವರ್ಣಗೌರಿಯವರು ಅತಿಥಿಗಳನ್ನು ಸ್ವಾಗತಿಸಿದರು. ಕಾರ್ಯಕಾರಿ ನಿರ್ದೇಶಕಿ ರೂಪಲಕ್ಷ್ಮಿ ಕಾರ್ಯಕ್ರಮವನ್ನು ನಿರೂಪಿಸಿ ರಾಯನ್ ಫೆರ್ನಾಂಡಿಸ್ ವಂದಿಸಿದರು.

# ಸೇವಾಧಾಮಕ್ಕೆ ಸಹಾಯಹಸ್ತ, ಕೊಡುಗೆ ಮತ್ತು ಭೇಟಿಗಳು



ಸೌತಡ್ಕ : ಏಪ್ರಿಲ್ 1 ರಂದು ಬಿಜಾಪುರ ಇಂಟೆಗ್ರಿಟಿ ರೂರಲ್ ಡೆವಲಪ್ಮೆಂಟ್ ಸೊಸೈಟಿ, (ಬರ್ಡ್ಸ್) ಬಾಗಲಕೋಟೆ ಟ್ರಸ್ಟ್ ಕಡೆಯಿಂದ ಸೇವಾಧಾಮ ಕೇಂದ್ರಕ್ಕೆ ಆಗಮಿಸಿ, ಕಾರ್ಯಗಳನ್ನು ವೀಕ್ಷಿಸಿ ಪ್ರಶಂಸಿಸಿದರು. ಭೇಟಿಯ ಸಂದರ್ಭ ಟ್ರಸ್ಟ್‌ನ ಕಾರ್ಯದರ್ಶಿಯಾದ ಡಿ. ಎಫ್. ಮಹಾಂತೇಶ್, ಜನಹಿತ ಸಂಸ್ಥೆಯಿಂದ ಪರಿಮಳ, ಪದ್ಮಕುಲಕರ್ಣಿ, ರಾಜೇಶ್ವರಿ, ಗೋವಿಂದ ಪೂಜಾರಿ, ರೂರಲ್ ಸೊಸೈಟಿಯಿಂದ ರಾಜ್‌ಕುಮಾರ್ ಪಾಟೀಲ್ ಉಪಸ್ಥಿತರಿದ್ದರು.

ಏಪ್ರಿಲ್ 1 ರಂದು ಮುಂಬೈ ನಿವಾಸಿಯಾದ ಡಾ| ಅನುರಾಧ ಶ್ರೀನಿವಾಸರ ಕುಟುಂಬವು ಸೇವಾಧಾಮದ ಸನಿವಾಸಿಗಳಿಗೆ 2 ದಿನಗಳ ಊಟೋಪಚಾರ ಖರ್ಚು ರೂ. 6000 ವನ್ನು ಭರಿಸಿ ಓರ್ವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ರೂ. 5000 ಮೌಲ್ಯದ ಒಂದು ಗಾಲಿಕುರ್ಚಿಯನ್ನು ಒದಗಿಸುತ್ತಿದ್ದಾರೆ. ಕುಟುಂಬಕ್ಕೆ ಸೇವಾಭಾರತಿ ತಂಡ ಧನ್ಯವಾದವಿತ್ತು, ಇಂಥಹ ಕಾರ್ಯ ಎಲ್ಲರಿಗೂ ಮಾದರಿ ಎಂದು ಅವರನ್ನು ಅಭಿನಂದಿಸಲಾಯಿತು.

ಏಪ್ರಿಲ್ 2 ರಂದು ಮುಂಬೈ ನಿವಾಸಿಯಾದ ಶ್ರೀಮತಿ ಭಾಮ ಗೋಪಾಲಚಾರಿಯವರು ತಮ್ಮ ಹುಟ್ಟುಹಬ್ಬದ ಪ್ರಯುಕ್ತ ಸೇವಾಧಾಮದ ಸನಿವಾಸಿಗಳಿಗೆ ಒಂದು ದಿನದ ಊಟೋಪಚಾರದ ಖರ್ಚು ರೂ. 3000/– ಭರಿಸಿ, ಓರ್ವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ರೂ. 15000 ಮೌಲ್ಯದ ಗಾಲಿ ಕುರ್ಚಿಯನ್ನು ಕೊಡುಗೆಯಾಗಿ ನೀಡುತ್ತಿದ್ದು ಸೇವಾಭಾರತಿ ತಂಡವು ಅವರಿಗೆ ಕೃತಜ್ಞತೆ ವ್ಯಕ್ತಪಡಿಸಿದೆ.



ಏಪ್ರಿಲ್ 27 ರಂದು ಶ್ರೀ ವಿಜೇತ ವಿನಾಯಕ ಪ್ರಭು ಆಲಂದಡ್ಕ ಇವರು ತಮ್ಮ ಕುಟುಂಬದೊಂದಿಗೆ ದಿ. 27/04/2022 ರಂದು ಸೇವಾಧಾಮಕ್ಕೆ ಆಗಮಿಸಿ ಕಾರ್ಯಗಳನ್ನು ವೀಕ್ಷಿಸಿ ಕಾರ್ಯಚಟುವಟಿಕೆಗಳ ನಿರಂತರತೆಗಾಗಿ ರೂ. 10000/– ವನ್ನು ದೇಣಿಗೆ ನೀಡಿರುತ್ತಾರೆ. ಸಂಸ್ಥೆಯು ಅವರ ಕುಟುಂಬಕ್ಕೆ ಶುಭಹಾರೈಸಿರುತ್ತದೆ.



ಏಪ್ರಿಲ್ 14 ರಂದು ಧರ್ಮಸ್ಥಳದ ಉದ್ಯಮಿ ಡಿ.ಎ. ಪುರುಷೋತ್ತಮರು ಕುಟುಂಬದೊಂದಿಗೆ ಸೇವಾಧಾಮಕ್ಕೆ ಭೇಟಿ ನೀಡಿ ಸನಿವಾಸಿಗಳಿಗೆ ಶುಭಹಾರೈಸಿರುತ್ತಾರೆ.



ಏಪ್ರಿಲ್ 26 ರಂದು ಯತೀಂದ್ರ ಕಾಣಿಯೂರು ಭೇಟಿ ನೀಡಿರುತ್ತಾರೆ. ಇವರು ಸೇವಾಧಾಮದಲ್ಲಿ ಈ ಹಿಂದೆ ಪುನಃಶ್ಚೇತನ ಗೊಂಡಿರುತ್ತಾರೆ.



ಏಪ್ರಿಲ್ 28 ರಂದು ಜಿತೇಶ್ ಶೆಟ್ಟಿ ಉಪ್ಪಾಡಿ ಇವರು ತಮ್ಮ ಕುಟುಂಬದೊಂದಿಗೆ ಸೇವಾಧಾಮಕ್ಕೆ ಆಗಮಿಸಿ ಕಾರ್ಯಗಳನ್ನು ವೀಕ್ಷಿಸಿ ಕಾರ್ಯಚಟುವಟಿಕೆಗಳ ನಿರಂತರತೆಗಾಗಿ ರೂ. 2000/– ವನ್ನು ದೇಣಿಗೆ ನೀಡಿರುತ್ತಾರೆ. ಸಂಸ್ಥೆಯು ಅವರ ಕುಟುಂಬಕ್ಕೆ ಶುಭಹಾರೈಸಿರುತ್ತದೆ.




ಏಪ್ರಿಲ್ 25 ರಂದು ಸೇವಾಧಾಮಕ್ಕೆ ಶ್ರೀಗೋಪಾಲಕೃಷ್ಣ ಭಟ್ ಭೇಟಿ ನೀಡಿ ರೂ. 500 ದೇಣಿಗೆಯಿತ್ತು ಸಹಕರಿಸಿದ್ದು, ಸಂಸ್ಥೆಯು ಅವರ ಕುಟುಂಬಕ್ಕೆ ಅಭಿನಂದಿಸಿ ಶುಭಹಾರೈಸಿರುತ್ತದೆ.



ಏಪ್ರಿಲ್ 9 ರಂದು ಕೆಮ್‌ಟ್ರೆಂಡ್ ಕೆಮಿಕಲ್ಸ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರಿನ ಸಿಇಒ ಶ್ರೀ ರಾಜೇಶ್ ಫಡ್ಕೆ ಮತ್ತು ಏರಿಯಾ ಮೇನೇಜರ್ ಆಗಿರುವ ಎಂ. ಕಾರ್ಯಪ್ಪ ಸೇವಾಧಾಮ ಕೇಂದ್ರವನ್ನು ಭೇಟಿ ಮಾಡಿ, 10 ಗಾಲಿ ಕುರ್ಚಿಗಳನ್ನು ಹಸ್ತಾಂತರಿಸಿದರು.




ಏಪ್ರಿಲ್ 25 ರಂದು ಬೆಂಗಳೂರಿನ ಗಿಫ್ಟ್‌ಏಬಲ್ಡ್ ಸಂಸ್ಥೆಯ ವಂಶಿಕ ಸೇವಾಧಾಮಕ್ಕೆ ಭೇಟಿನೀಡಿ ಸ್ವಉದ್ಯೋಗದ ಬಗ್ಗೆ ಸನಿವಾಸಿಗಳಿಗೆ ಮಾಹಿತಿ ನೀಡಿರುತ್ತಾರೆ. ಈಗಾಗಲೇ ಸೇವಾಭಾರತಿಯು ಈ ಸಂಸ್ಥೆಯೊಂದಿಗೆ 25 ಬೆನ್ನುಹುರಿ ಅಪಘಾತಕ್ಕೊಳಗಾದ ವ್ಯಕ್ತಿಗಳಿಗೆ ಸ್ವ ಉದ್ಯೋಗ ಯೋಜನೆಯಡಿ ಜೇನು ಕೃಷಿಗಾಗಿ ಒಡಂಬಡಿಕೆ ಮಾಡಿಕೊಂಡಿರುವುದು ಉಲ್ಲೇಖನೀಯ.








## ಮೆಡಿಕಲ್ ಕಿಟ್‌ಗಾಗಿ ಕೊಡುಗೆ

ಏಪ್ರಿಲ್ 29 ರಂದು ಮಲ್ವೆಯಲ್ಲಿ ನಡೆದ ಎಂ.ಪಿ.ಎಲ್. ಲೀಗ್–2022 ಕ್ರಿಕೆಟ್ ಪಂದ್ಯಾಟದ ಸಂದರ್ಭ ಬೆನ್ನುಹುರಿ ಮುರಿತಕ್ಕೊಳಗಾದ ದಿವ್ಯಾಂಗರ ಮೆಡಿಕಲ್ ಕಿಟ್‌ಗಾಗಿ ರೂ. 30,000/– ಕೊಡುಗೆ ಸ್ವೀಕರಿಸಲಾಯಿತು.

# ಉಚಿತ ಆರೋಗ್ಯ ತಪಾಸಣೆ ಮತ್ತು ಅರಿವು ಕಾರ್ಯಾಗಾರ




**ಮೂಡಿಗೆರೆ :** ಏಪ್ರಿಲ್ 21 ಮತ್ತು 22 ರಂದು ದಯಾಕರ ಆಸ್ಪತ್ರೆ ಮೂಡಿಗೆರೆಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಎರಡು ದಿನಗಳ 15ನೇ ಉಚಿತ ವೈದ್ಯಕೀಯ ತಪಾಸಣಾ ಶಿಬಿರ ಹಾಗೂ ಅರಿವು ಕಾರ್ಯಗಾರ ಏರ್ಪಡಿಸಲಾಗಿತ್ತು. ಈ ಶಿಬಿರವನ್ನು ಡಾ. ಹೇಮಂತ ನಾಯ್ಕರವರು ಉದ್ಘಾಟಿಸಿ, ಫಲಾನುಭವಿಗಳಿಗೆ ಶುಭ ಹಾರೈಸಿದರು. ಮುಖ್ಯ ಅತಿಥಿಗಳಾಗಿ ರೋ. ಪ್ರದೀಪ್ ಕುಮಾರ್ ಇವರು ಉಪಸ್ಥಿತರಿದ್ದರು. ಇದರಲ್ಲಿ 9 ಜನ ಫಲಾನುಭವಿಗಳಿಗೆ ರಕ್ತದೊತ್ತಡ ಪರೀಕ್ಷೆ, ಸ್ಕ್ಯಾನಿಂಗ್, ಕ್ಷ –ಕಿರಣ, ಫಿಸಿಯೋಥೆರಪಿ, ಗಾಲಿಕುರ್ಚಿ ಕೌಶಲ್ಯ ತರಬೇತಿ, ಡಯಾಬಿಟಿಕ್ ಪರೀಕ್ಷೆ, ಆಹಾರ ಪಥ್ಯಕ್ರಮ, ಚರ್ಮ ರಕ್ಷಣೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಗಾರ, ಸ್ವಉದ್ಯೋಗಕ್ಕಾಗಿ ಪ್ರೇರಣೆ ಮತ್ತು ಮಾಹಿತಿಯನ್ನು ಒದಗಿಸಲಾಯಿತು. 6 ಗಾಲಿ ಕುರ್ಚಿಗಳನ್ನು ವಿತರಿಸಲಾಯಿತು.

ಸೇವಾಭಾರತಿ ಅಧ್ಯಕ್ಷರಾದ ಕೆ. ವಿನಾಯಕ ರಾವ್‌ರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ದಾರದಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಮೆಡಿಕಲ್ ಆಫೀಸರ್ ಡಾ. ಹೇಮರಾಜ್, ದಯಾಕರ ಹಾಸ್ಪಿಟಲ್‌ನ ಆಡಳಿತಾಧಿಕಾರಿಯಾದ ಶ್ರೀಮತಿ ಸವಿತಾ ಉಪಸ್ಥಿತ ರಿದ್ದರು.

ಸೇವಾಧಾಮದ ಡೈರೆಕ್ಟರ್ ರಾಯನ್ ಫೆರ್ನಾಂಡಿಸ್‌ರವರು ಹಾಗೂ ಸೇವಾಭಾರತಿಯ ಸಿಬ್ಬಂದಿಗಳು ಹಾಜರಿದ್ದರು. ಈ ಶಿಬಿರದ ಯಶಸ್ಸಿಗೆ ಎ.ಪಿ.ಡಿ. ಬೆಂಗಳೂರು, ಫೈಂ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಬೆಂಗಳೂರು, ದಯಾಕರ ಹಾಸ್ಪಿಟಲ್ ಮೂಡಿಗೆರೆ, ಮೂಡಿಗೆರೆ ರೋಟರಿಯವರು ಸಹಭಾಗಿತ್ವ ನೀಡಿದರು. ಸಮಾರೋಪ ಕಾರ್ಯಕ್ರಮದಲ್ಲಿ ದಯಾಕರ ಹಾಸ್ಪಿಟಲ್‌ನ ಆಡಳಿತಾಧಿಕಾರಿಗಳು, ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ಮೈಸೂರಿನ ಜೆ.ಎಸ್. ಕಾಲೇಜಿನ ಫಿಸಿಯೋಥೆರಪಿ ವಿಭಾಗದ ಹೆಡ್. ಶ್ರೀ ಸಂದೀಪ್, ಶ್ರೀಮತಿ ರೂಪಲಕ್ಷ್ಮೀ, ಡೈರೆಕ್ಟರ್ ರಾಯನ್ ಫೆರ್ನಾಂಡಿಸ್ ಕಾರ್ಯ ಕ್ರಮದಲ್ಲಿ ಉಪಸ್ಥಿತರಿದ್ದರು. ಕಾರ್ಯದರ್ಶಿ ಶ್ರೀಮತಿ ಸ್ವರ್ಣಗೌರಿ ಯುವರು ಸ್ವಾಗತಿಸಿ, ಮನುರವರು ಧನ್ಯವಾದವಿತ್ತರು. ಕಾರ್ಯಕ್ರಮವನ್ನು ಆಶ್ರೀತ ಸಿ.ಪಿ.ಯವರು ನಿರೂಪಿಸಿದರು.



ಏಪ್ರಿಲ್ 27ರಂದು ಉತ್ತರ ಕನ್ನಡ ಜಿಲ್ಲೆಯ DDWO ಶ್ರೀ ರಾಘವೇಂದ್ರ ಭಟ್‌ರವರನ್ನು ಸೇವಾಭಾರತಿಯ ತಂಡ ಭೇಟಿ ಮಾಡಿ, ಸೇವಾಧಾಮ ಹಾಗೂ ಸೇವಾಭಾರತಿಯ ಕಾರ್ಯಚಟುವಟಿಕೆಗಳು ಹಾಗೂ ಸೇವೆಗಳ ಬಗ್ಗೆ ವಿವರಿಸಿ, ಉತ್ತರಕನ್ನಡ ಜಿಲ್ಲೆಯಲ್ಲಿಯೂ ನಮ್ಮ ಸೇವೆಯನ್ನು ಮುಂದುವರಿಸಲು ಅಗತ್ಯವಾದ ಬೆನ್ನುಹುರಿ ಗಾಯಕ್ಕೊಳಗಾದವರ ಅಂಕಿಅಂಶ ಹಾಗೂ ಅವರಿಗೆ ಅರಿವು ಮೂಡಿಸುವ ಕಾರ್ಯಾಗಾರವನ್ನು ಏರ್ಪಡಿಸುವ ನಿಟ್ಟಿನಲ್ಲಿ ಸಹಕಾರವನ್ನು ಕೋರಲಾಯಿತು. ಆ ವೇಳೆ ಸಿಬ್ಬಂದಿಗಳಾದ ರೂಪಾಲಕ್ಷ್ಮಿ, ಚರಣ್ ಹಾಗೂ ಪಿ.ಎಚ್.ಡಿ. ಸ್ಕಾಲರ್ ಆಶಾಲತಾ ಉಪಸ್ಥಿತರಿದ್ದರು.



ಏಪ್ರಿಲ್ 27 ರಂದು ಉತ್ತರಕನ್ನಡ ಜಿಲ್ಲೆಯ ಡಿ.ಸಿ. ಡಾ.ಶರತ್ ನಾಯ್ಕರವರನ್ನು ಸೇವಾಭಾರತಿಯ ತಂಡ ಭೇಟಿ ಮಾಡಿ, ಸೇವಾಧಾಮ ಹಾಗು ಸೇವಾಭಾರತಿಯ ಕಾರ್ಯಚಟುವಟಿಕೆಗಳು ಹಾಗು ಸೇವೆಗಳ ಬಗ್ಗೆ ವಿವರಿಸಿ, ಉತ್ತರಕನ್ನಡ ಜಿಲ್ಲೆಯಲ್ಲಿಯೂ ನಮ್ಮ ಸೇವೆಯನ್ನು ಮುಂದುವರಿಸಲು ಅಗತ್ಯವಾದ ಬೆನ್ನುಹುರಿ ಗಾಯಕ್ಕೊಳಗಾದವರ ಅಂಕಿಅಂಶ ಹಾಗೂ ಅವರಿಗೆ ಅರಿವು ಮೂಡಿಸುವ ಕಾರ್ಯಾಗಾರವನ್ನು ಏರ್ಪಡಿಸುವ ನಿಟ್ಟಿನಲ್ಲಿ ಸಹಕಾರವನ್ನು ಕೋರಲಾಯಿತು. ಆ ವೇಳೆ ಸಿಬ್ಬಂದಿಗಳಾದ ರೂಪಲಕ್ಷ್ಮಿ, ಚರಣ್ ಹಾಗೂ ಪಿ.ಎಚ್.ಡಿ. ಸ್ಕಾಲರ್ ಆಶಾಲತಾ ಉಪಸ್ಥಿತರಿದ್ದರು.



ಏಪ್ರಿಲ್ 27 ರಂದು ಉತ್ತರಕನ್ನಡ ಜಿಲ್ಲೆಯ ಕಾರವಾರ ತಾಲೂಕಿನ ಶಾಸಕರಾದ ಶ್ರೀಮತಿ ರೂಪಾಲಿ ನಾಯ್ಕರನ್ನು ಸೇವಾಭಾರತಿ ಯ ತಂಡ ಭೇಟಿ ಮಾಡಿ, ಸೇವಾಧಾಮ ಹಾಗೂ ಸೇವಾಭಾರತಿಯ ಕಾರ್ಯಚಟುವಟಿಕೆಗಳು ಹಾಗೂ ಸೇವೆಗಳ ಬಗ್ಗೆ ವಿವರಿಸಿ, ಉತ್ತರಕನ್ನಡ ಜಿಲ್ಲೆಯಲ್ಲಿಯೂ ನಮ್ಮ ಸೇವೆಯನ್ನು ಮುಂದುವರಿಸಲು ಅಗತ್ಯವಾದ ಬೆನ್ನುಹುರಿ ಗಾಯಕ್ಕೊಳಗಾದವರ ಅಂಕಿಅಂಶ ಹಾಗೂ ಅವರಿಗೆ ಅರಿವು ಮೂಡಿಸುವ ಕಾರ್ಯಾಗಾರವನ್ನು ಏರ್ಪಡಿಸುವ ನಿಟ್ಟಿನಲ್ಲಿ ಸಹಕಾರವನ್ನು ಕೋರಲಾಯಿತು. ಆ ವೇಳೆ ಸಿಬ್ಬಂದಿಗಳಾದ ರೂಪಲಕ್ಷ್ಮಿ, ಚರಣ್ ಹಾಗೂ ಪಿ.ಎಚ್.ಡಿ. ಸ್ಕಾಲರ್ ಆಶಾಲತಾ ಉಪಸ್ಥಿತರಿದ್ದರು

## ರೋಟರಿ ಕ್ಲಬ್‌ನಲ್ಲಿ ಮಾಹಿತಿ ಕಾರ್ಯಾಗಾರ




ಏಪ್ರಿಲ್ 27 ರಂದು ಬಾಳೆಹೊನ್ನೂರು ಮತ್ತು ಜಯಪುರ ರೋಟರಿ ಕ್ಲಬ್ ಆಯೋಜಿಸಿದ್ದ ಸಭೆಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಸೇವಾಭಾರತಿಯ ಕಾರ್ಯಕ್ರಮ ಸಂಯೋಜಕರಾದ ಆಶ್ರಿತ ಸಿ.ಪಿ.ಯವರು ಬೆನ್ನುಹುರಿ ಅಪಘಾತದ ಕುರಿತು ಜಾಗೃತಿ ಮೂಡಿಸಿದರು. ಕಾರ್ಯಾಗಾರದಲ್ಲಿ 42 ಜನ ಹಾಜರಿದ್ದರು.

## ವಿಧಾನ ಪರಿಷತ್ ಸದಸ್ಯರಿಂದ ಸೇವಾಧಾಮಕ್ಕೆ 19 ಗಾಲಿ ಕುರ್ಚಿಗಳ ಕೊಡುಗೆ




ಏಪ್ರಿಲ್ 28 ರಂದು ವಿಧಾನ ಪರಿಷತ್ ಸದಸ್ಯರಾದ ಕೆ. ಪ್ರತಾಪಸಿಂಹ ನಾಯಕರವರು ಪ್ರದೇಶಾಭಿವೃದ್ಧಿ ನಿಧಿಯಡಿ ಸೇವಾಭಾರತಿಯ ಸೇವಾಪ್ರಕಲ್ಪವಾದ ಸೌತಡ್ಕದ ಸೇವಾಧಾಮ ಬೆನ್ನುಹುರಿ ಅಪಘಾತಕ್ಕೆ ಒಳಗಾದವರಿಗಾಗಿರುವ ಪುನಃಶ್ಚೇತನ ಕೇಂದ್ರಕ್ಕೆ ರೂಪಾಯಿ 2 ಲಕ್ಷದ 14 ಸಾವಿರ ಮೌಲ್ಯದ 19 ಗಾಲಿಕುರ್ಚಿಗಳನ್ನು ಹಸ್ತಾಂತರಿಸಿದರು. ಅವರು ಸೇವಾಧಾಮಕ್ಕೆ ಆಗಮಿಸಿ ದಿವ್ಯಾಂಗರಿಗೆ ಮುಖ್ಯವಾಹಿನಿಗೆ ಬರುವಂತಾಗಲು ಪ್ರತಿನಿಧಿಗಳು ಮತ್ತು ನಮ್ಮ ಸರ್ಕಾರ ಬದ್ಧವಾಗಿದೆ. ಈ ನಿಟ್ಟಿನಲ್ಲಿ ದಿವ್ಯಾಂಗರಿಗೆ ಸೌಲಭ್ಯಗಳನ್ನು ಪಡಕೊಂಡು ಉತ್ತಮ ಜೀವನವನ್ನು ಪಡೆದುಕೊಳ್ಳುವಂತಾಗಬೇಕು ಎಂದು ಗಾಲಿಕುರ್ಚಿಗಳನ್ನು ವಿತರಿಸಿ ಫಲಾನುಭವಿಗಳಿಗೆ ಶುಭ ಹಾರೈಸಿದರು.

ಕಾರ್ಯಕ್ರಮವನ್ನು ಚರಣ್ ನಿರೂಪಿಸಿದರು. ಸೇವಾಧಾಮದ ಸಂಚಾಲಕರಾದ ಪುರಂದರ ರಾವ್ ಸ್ವಾಗತಿಸಿ, ಸೇವಾಭಾರತಿಯ ಅಧ್ಯಕ್ಷರಾದ ಕೆ. ವಿನಾಯಕ ರಾವ್ ಕಾರ್ಯಚಟುವಟಿಕೆಗಳ ಬಗ್ಗೆ ಪ್ರಸ್ತಾಪಿಸಿದರು. ಮೆನೇಜರ್ ಮೋಹನ ವಂದಿಸಿದರು.

ವೇದಿಕೆಯಲ್ಲಿ ಕೊಕ್ಕಡ ಗ್ರಾಮ ಪಂಚಾಯತು ಅಧ್ಯಕ್ಷರಾದ ಯೋಗೇಶ ಆಳಂಬಿಲ, ಸೌತಡ್ಕ ಶ್ರೀ ಮಹಾಗಣಪತಿ ಸೇವಾಟ್ರಸ್ಟ್‌ನ ಅಧ್ಯಕ್ಷರಾದ ಕೆ.ಕೃಷ್ಣಭಟ್, ಸೇವಾಭಾರತಿಯ ಖಜಾಂಚಿ ಬಿ.ಕೃಷ್ಣಪ್ಪ ಗುಡಿಗಾರ್, ಟ್ರಸ್ಟಿ ಬಾಲಕೃಷ್ಣರವರು ಉಪಸ್ಥಿತರಿದ್ದರು.

## ಏಪ್ರಿಲ್ ತಿಂಗಳಲ್ಲಿ ಗಾಲಿ ಕುರ್ಚಿ ಪಡೆದುಕೊಂಡವರು

1. ಶ್ರೀ ಶಾಂತಾರಾಮ ಶೆಟ್ಟಿ, ಅಂಪಾರ್, ಬೈಂದೂರು ತಾ।
2. ಶ್ರೀ ಶಾಜಿ ಪಟ್ಟಮನ, ಜಡ್ಕಲ್, ಬೈಂದೂರು ತಾ।
3. ಶ್ರೀ ಸಾಕು ಶೆಟ್ಟಿ, ಎಲ್ಲೂರು, ಬೈಂದೂರು ತಾ।
4. ಶ್ರೀ ಚಂದ್ರ ದೇವಾಡಿಗ, ಕಂಬದಕೋಣೆ, ಬೈಂದೂರು ತಾ।
5. ಶ್ರೀ ಮಾದವ ದೇವಾಡಿಗ, ಬಡಕೇರಿ, ಬೈಂದೂರು ತಾ।
6. ಶ್ರೀ ಸುರೇಶ ಪೂಜಾರಿ, ನಾಗೂರ್, ಬೈಂದೂರು ತಾ।
7. ಶ್ರೀ ಸುಬ್ರಹ್ಮಣ್ಯ ಮೊಗವೀರ, ಸೇನಾಪುರ, ಬೈಂದೂರು ತಾ।
8. ಶ್ರೀ ರಾಮಣ್ಣ ಗೌಡ, ಸಾಮೆದಕಲಪ್ಪು, ಬೆಳ್ತಂಗಡಿ
9. ಶ್ರೀ ಸೋಮೇಶ್, ಬಣಕಲ್, ಮೂಡಿಗೆರೆ ತಾ।
10. ಶ್ರೀ ದಿನೇಶ್
11. ಶ್ರೀ ನಂದನ, ಹುಣಸೆಹಳ್ಳಿ, ಚಿಕ್ಕಮಗಳೂರು
12. ಶ್ರೀ ಪ್ರಶಾಂತ ಎಂ. ತಾವ್ರೋ, ಕಳಸ, ಮೂಡಿಗೆರೆ ತಾ।
13. ಶ್ರೀ ಮಂಜುನಾಥ ಎಸ್., ಮೂಡಿಗೆರೆ ತಾ।

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು** : ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಮೆಡಿಕಲ್ ಕಿಟ್‌ಗಳು.

**ಆರೋಗ್ಯ ಸ್ಪರ್ಶ** : ಉಡುಪಿ ಜಿಲ್ಲೆಯಲ್ಲಿರುವ ಬೆನ್ನು ಹುರಿ ಅಪಘಾತ ಗೊಂಡವರಿಗಾಗಿ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ಮನೆಮನೆಗಳಿಗೆ ಭೇಟಿ ನೀಡಿ ಆರೋಗ್ಯ ತಪಾಸಣೆ.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆಂಬುಲೆನ್ಸ್ ಸೇವೆಗಳು.

**ಸಾಮರ್ಥ್ಯಮ್** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ವೃತ್ತಿ ತರಬೇತಿಗಳು.

**ಸೇವಾ ಚರಣ್** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಸಾಧನ ಸಲಕರಣೆಗಳ ಸಹಾಯ.

**ಸೇವಾನಿರ್ಮಲ** : ದಿವ್ಯಾಂಗ ಸ್ನೇಹಿ ರಾಂಪ್ ಮತ್ತು ಶೌಚಾಲಯಗಳಿಗೆ ಭಾಗಶಃ ಧನ ಸಹಾಯ.

**ಆರೋಗ್ಯ ಸಿಂಧು** : ಆರೋಗ್ಯ ತಪಾಸಣೆ ಮಾಹಿತಿ ಹಾಗೂ ತರಬೇತಿಗಳು.

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

**ರೂ. 2000/–** ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ.

**ರೂ. 6000/–** ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ

**ರೂ. 4500/–** ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ

**ರೂ. 3000/–** ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ದಿನದ ಊಟೋಪಚಾರಕ್ಕೆ ಸಹಕಾರ

**ರೂ. 10000/–** ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ

**ರೂ. 15000/–** ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ

**ರೂ. 10000/–** ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು

### Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**